ನಿಯೋಜನೆ ಮಾಡುವುದು ಬಿಟ್ಟರೆ ಮತ್ತೆ ಬೇರೆ ಏನು ಮಾಡುವುದಕ್ಕಾಗುವುದಿಲ್ಲ. ಆಯಾ ಕಡೆ ಯಾರು ಗೆಸ್ಟ್ ಬೋಧಕರಿರುತ್ತಾರೆ ಅವರು ಆಯಾ ಕಾಲೇಜಿನಲ್ಲಿ ಒಂದು ಗಂಟೆ ಪಾಠ ಮಾಡುವುದಕ್ಕೆ ಒಂದು ನೂರು ರೂಪಾಯಿಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಕ್ಕೆ ನಮ್ಮ ಶಾಸಕ ಮಿತ್ರರು ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೆಗೌಡ: ಕಾಲೇಜುಗಳಿಗೆ ಒಂದು ಗಂಟೆ ಪಾಠ ಮಾಡುವ ಆಧಾರದ ಮೇಲೆ ಹೋಗುತ್ತಿರುವ ಬೋಧಕರಿಗೆ ಎರಡು ವರ್ಷಗಳಿಂದ ಹಣವನ್ನೇ ಕೊಟ್ಟಿಲ್ಲ. ಅವರೆಲ್ಲರೂ ಬಹಳ ಕಡೆ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. ಟೆಂಪರರಿ ಅಪಾಯಿಂಟ್‌ಮೆಂಟ್ ಆಧಾರದ ಮೇಲೆ ನೇಮಕ ಆಗಿರುವರು ಮೂರ್ನಾಲ್ಕುಗಂಟೆ ದಿವಸಕ್ಕೆ ಪಾಠ ಮಾಡಿರುತ್ತಾರೆ, ಎರಡು ವರ್ಷಗಳಿಂದ ಅವರಿಗೆ ಹಣವನ್ನೇ ಕೊಟ್ಟಿಲ್ಲ, ಅವರೆಲ್ಲಾ ನಾವು ಕಾಲೇಜಿಗೆ ಪಾಠ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳುವ ವದಂತಿ ಇದೆ.

ಅಧ್ಯಕ್ಷರು: ಅದನ್ನು ಕೊಡಿಸುವ ವ್ಯವಸ್ಥೆ ಮಾಡಿಸೋಣ.

ವಿಷಯ: ದಾವಣಗೆರೆ ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜು ಕಟ್ಟಡಗಳ ನಿರ್ಮಾಣ.

226 (1496)

ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ತಾಲ್ಲೂಕಿನಲ್ಲಿ ಎಷ್ಟು ಪದವಿ ಪೂರ್ವ ಕಾಲೇಜುಗಳಿವೆ?

ಆ) ಆ ಪೈಕಿ ಎಷ್ಟು ಕಾಲೇಜುಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ?

ಇ) ಉಳಿದ ಕಾಲೇಜುಗಳಿಗೆ ಯಾವಾಗ ಕಟ್ಟಡವನ್ನು ಕಟ್ಟಲಾಗುವುದು? (ವಿವರವಾದ ಮಾಹಿತಿ ನೀಡುವುದು)

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) ದಾವಣಗೆರೆ ತಾಲ್ಲೂಕಿನಲ್ಲಿ 11 ಸರ್ಕಾರಿ 07 ಅನುದಾನಿತ ಮತ್ತು 16 ಅನುದಾನ ರಹಿತ ಪದವಿಪೂರ್ವ ಕಾಲೇಜುಗಳು ಇರುತ್ತವೆ.

ಆ) ಎಲ್ಲಾ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಸ್ವಂತ ಕಟ್ಟಡಗಳಲ್ಲಿ

ನಡೆಯುತ್ತಿವೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎ.ರವೀಂದ್ರನಾಥ್: ನಮ್ಮ ದಾವಣಗೆರೆ ತಾಲ್ಲೂಕಿನ ಎಲ್ಲಾ ಪದವಿಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡವಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಮಾಯಕೊಂಡ, ಕೊಡಗನೂರು, ಕಕ್ಕನಕೊಳ್ಳ ಲೋಕಿಕೆರೆ ಇಲ್ಲಿ ಹಾಲಿ ಬಿಲ್ಡಿಂಗ್ ಕೆಲಸ ಪ್ರಾರಂಭ ಮಾಡಿದರು. ಇದುವರೆವಿಗೂ ಕೆಲಸ ಪೂರ್ತಿಯಾಗಿಲ್ಲ. ಅದೇ ರೀತಿ ದೊಡ್ಡಬಾತಿ ಹಾಗೂ ಕುಕ್ವಾರದಲ್ಲೂ ಕಾಲೇಜುಗಳಿದ್ದಾವೆ, ಅಲ್ಲಿ ಟೆಂಡರ್ ಕರೆದು ಎಲ್ಲಾ ಮಾಡಿದರೂ ಕೂಡ ಎರಡು ವರ್ಷದಿಂದ ಯಾವುದೇ ರೀತಿಯ ಕೆಲಸ ಪ್ರಾರಂಭವಾಗಿಲ್ಲ. ಆದುದರಿಂದ ಇವರು ತಮ್ಮ ಎಲ್ಲಾ ಕಾಲೇಜುಗಳಿಗೆ ಕಟ್ಟಡಗಳಿದ್ದಾವೆಂದು ಹೇಳಿದ್ದಾರೆ, ಅದರ ಬಗ್ಗೆ ನನಗೆ ಉತ್ತರ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸ್ನೇಹಿತರು ಕಟ್ಟಡಗಳ ಅವಶ್ಯಕತೆ ಇದ್ದಾವೆಂದು ಏನು ಹೇಳಿದ್ದಾರೆ, ಅಲ್ಲಿ ಪೂರೈಸಲಾಗುವುದು. ಲೋಕೋಪಯೋಗಿ ಮಂತ್ರಿಗಳು, ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್‌ರವರನ್ನು ಕರೆಯಿಸಿ ಎಲ್ಲೆಲ್ಲಿ ಹಣದ ಅವಶ್ಯಕತೆ ತಕ್ಷಣ ಇರುವುದಿಲ್ಲ, ಅಲ್ಲಿಂದ ಹಣವನ್ನು ತೆಗೆದುಕೊಂಡು ಎಲ್ಲೆಲ್ಲಿ ಸ್ಟಿಲ್ ಓವರ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯತೆ ಇದೆಯೋ ಅದನ್ನು ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಬೇರೆ ಕಡೆಗೆ ಹೋಲಿಸಿ ನೋಡಿದರೆ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಕಟ್ಟಡದ ಸಮಸ್ಯೆ ಅಷ್ಟು ಪ್ರಮಾಣದಲ್ಲಿ ಇಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಅರ್ಧಂಬರ್ಧ ವಾಗಿರುವ ಬಿಲ್ಡಿಂಗಳೇ ಜಾಸ್ತಿ ಇದ್ದಾವೆ. ಹತ್ತು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಮಾತ್ರ ಆ ಕಟ್ಟಡ ಪೂರ್ತಿಯಾಗುತ್ತವೆ. ಆದರೆ ಆ ಕಟ್ಟಡವನ್ನು ಇದೇ ರೀತಿಯಲ್ಲಿ ಬಿಟ್ಟರೆ ಮತ್ತೆ ಅವೂ ಕೂಡ ಬೀಳುವಂಥ ಸ್ಥಿತಿಗೆ ಬರುತ್ತವೆ. ಅದಕ್ಕೆ ದಯಮಾಡಿ ಶಿಕ್ಷಣ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಾಳೆದಿವಸ ಸಭೆಯನ್ನು ಕರೆದಿದ್ದೇನೆ. ಎಲ್ಲೆಲ್ಲಿ ಸ್ಟಿಲ್ ಓವರ್ ವರ್ಕ್ಸ್ ಇದೆ ಅವಕ್ಕೆ ಹಣವನ್ನು ಒದಗಿಸಿ ಅದಷ್ಟು ಜಾಗ್ರತೆ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನಿಸುತ್ತೇನೆ.

ವಿಷಯ: ಕಾಪು ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.